ಇಂದು ದಿ.08-09-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀಸವಾಲುಃ-** ಎದುರುದಾರರ ಪರ ಶ್ರೀ ಕೆ ಜಿ ಕೆ ಎಸ್ ವಕೀಲರಿಂದ.

ನನ್ನ ವಿದ್ಯಾಭ್ಯಾಸ ಬಿ.ಎ. ಮತ್ತು ಡಿಪ್ಲೋಮಾ ಇನ್ ಹಾರ್ಟಿಕಲ್ಚರ್ ಆಗಿರುತ್ತದೆ. ಮೇಲ್ಮನವಿ ಸಲ್ಲಿಸಿದ ನಂತರ ಈ ಪ್ರಕರಣದಲ್ಲಿ ಏನೇನು ಬೆಳವಣಿಗೆ ನಡೆದಿದೆ ಎಂದು ನನಗೆ ಮಾಹಿತಿ ಇದೆ. ಅದೇ ಪ್ರಕಾರ ಎದುರುದಾರರು ಈ ಮೇಲ್ಮನವಿಯಲ್ಲಿ ಯಾವ ಯಾವ ದಾಖಲೆಗಳನ್ನು ಹಾಜರುಪಡಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಎದುರುದಾರರು ಹಾಜರುಪಡಿಸಿದ ದಾಖಲೆಗಳ ಬಗ್ಗೆ ಅವು ಯಾವ ದಾಖಲೆಗಳು ಇರುತ್ತವೆ ಎಂದು ನಮ್ಮ ವಕೀಲರಿಂದ ನಾನು ತಿಳಿದುಕೊಳ್ಳುವ ಪ್ರಯತ್ನಪಟ್ಟಿಲ್ಲ. ಸದರಿ ದಾಖಲೆಗಳು ಯಾವುದು ಇರುತ್ತವೆ ಅಂತಾ ನಾನು ನಮ್ಮ ವಕೀಲರಿಂದ ತಿಳಿದುಕೊಂಡಿದ್ದರೆ ಆ ದಾಖಲೆಗಳ ಬಗ್ಗೆ ನನಗೆ ಮಾಹಿತಿ ತಿಳಿದಿರುತ್ತಿತ್ತು. ಎಂ ಹೆಚ್ ಜಯದೇವಯ್ಯ ನನ್ನ ತಂದೆ.

ವಿಚಾರಣಾ ನ್ಯಾಯಾಲಯದಲ್ಲಿ ನನ್ನ ಮತ್ತು ಎದುರುದಾರರ ಸಾಕ್ಷಿ ವಿಚಾರಣೆಯಾಗಿದೆ. ವಿಚಾರಣಾ ನ್ಯಾಯಾಲಯದಲ್ಲಿ ನನ್ನ ಕೇಸಿಗೆ ಅನುಗುಣವಾಗಿ ನಾನು ದಾಖಲಾತಿಗಳನ್ನು ಸಲ್ಲಿಸಲು ಸಾಧ್ಯವಾಗಿರುವುದಿಲ್ಲ. ನನ್ನ ತಂದೆ ಹೆಸರಿನಲ್ಲಿ ಎಷ್ಟು ಎಕರೆ ಗುಂಟೆ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಸಾಕ್ಷಿಗೆ ಪಹಣಿ ಪತ್ರಿಕೆ ಜಮೀನು ಸರ್ವೆ ನಂ.49/4 ಪಿ4, 5/1 ಪಿ2, 5/10 ನನ್ನ ತಂದೆಯ ಹೆಸರಿನಲ್ಲಿರುತ್ತವೆ ಅಂತಾ ಒಪ್ಪಿರುವುದರಿಂದ ಸದರಿ ದಾಖಲೆಗಳನ್ನು ನಿ.ಆರ್.1 ರಿಂದ 3 ಎಂದು ಗುರುತಿಸಲಾಯಿತು.

ನಾನು ಈ ಮೊದಲು ಸರ್ಕಾರಿ ನೌಕರನಾಗಿದ್ದೆ. ನಾನು ಸರ್ಕಾರಿ ನೌಕರನಾಗಿದ್ದ ಸಮಯದಲ್ಲಿ ನನ್ನ ಹಾಜರಿ ಪುಸ್ತಕ ಮತ್ತು ಸೇವಾ ಪುಸ್ತಕದ ಬಗ್ಗೆ ಮಾಹಿತಿ ಇದೆ. ಹಳದಮ್ಮ ದೇವಿ ಬಾಲಕಿಯರ ಪ್ರೌಢಶಾಲೆಯು ಹೊನ್ನಾಳಿಯಲ್ಲಿದೆ. ಸದರಿ ಪ್ರೌಢಶಾಲೆಯಲ್ಲಿ ಶಿಕ್ಷಕ ಸಿಬ್ಬಂದಿ ವರ್ಗದವರ ಬಗ್ಗೆ ಮಾಹಿತಿ ಹಕ್ಕಿನ ಅಡಿ ನಾನು ಒಂದು ಸಾರಿ ಮಾತ್ರ ಅರ್ಜಿ ಸಲ್ಲಿಸಿದ್ದೇನೆ. ಸದರಿ ಶಾಲೆಗೆ ಸಂಬಧಪಟ್ಟಂತೆ ಶಿಕ್ಷಣ ಇಲಾಖೆಗೂ ಸಹ ಮಾಹಿತಿ ಹಕ್ಕಿನ ಅಡಿ ದಾಖಲಾತಿ ಕೋರಿ ಅರ್ಜಿ ಸಲ್ಲಿಸಿದ್ದೇನೆ. ವಿಚಾರಣಾ ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿರುವ ಸಮಯದಲ್ಲಿ ಹಳದಮ್ಮ ದೇವಿ ಬಾಲಕಿಯರ ಪ್ರೌಢಶಾಲೆಗೆ

ಸಂಬಧಪಟ್ಟಂತೆ ಮಾಹಿತಿ ಹಕ್ಕಿನಡಿ ನಾನು ಅರ್ಜಿ ಸಲ್ಲಿಸಿಲ್ಲ. ಶಿಕ್ಷಣ ಇಲಾಖೆ ಅಧಿಕಾರಿಗಳಿಗೂ ಮತ್ತು ನನಗೂ ಯಾವುದೇ ವೈಯಕ್ತಿಕ ದ್ವೇಷವಿಲ್ಲ.

ದಿ.16-02-2023 ರಂದು ಈ ಮೇಲ್ಮನವಿಯಲ್ಲಿ ಎದುರುದಾರಳು ಹಳದಮ್ಮ ದೇವಿ ಬಾಲಕಿಯರ ಪ್ರೌಢಶಾಲೆಗೆ ಸಂಬಧಪಟ್ಟ ಹಾಜರಾತಿ ಮತ್ತು ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿದ್ದು ನನಗೆ ಗೊತ್ತಿಲ್ಲ. ಸದರಿ ಹಳದಮ್ಮ ದೇವಿ ಬಾಲಕಿಯರ ಪ್ರೌಢಶಾಲೆ ಹಾಜರಾತಿ ಪುಸ್ತಕ ನೋಡಿದರೆ ನನಗೆ ಗುರುತಿಸಲು ಆಗುವುದಿಲ್ಲ.

ಹಳದಮ್ಮ ದೇವಿ ಬಾಲಕಿಯರ ಪ್ರೌಢಶಾಲೆಯ ಹಾಜರಾತಿ ಪುಸ್ತಕ ಸಾಕ್ಷಿಗೆ ತೋರಿಸಿ ಅದರಲ್ಲಿ ಮೇಲಾಧಿಕಾರಿಗಳ ರುಜು ಇದೆ ಅಂತಾ ಒಪ್ಪಿಕೊಂಡಿರುತ್ತಾರೆ. ಸದರಿ ದಾಖಲಾತಿಗಳನ್ನು ಗುರುತಿಸಲು ಸಾಕ್ಷಿಗೆ ಕೊಟ್ಟಾಗ ಸಾಕ್ಷಿ ಸದರಿ ದಾಖಲೆಗಳು ಕಲರ್ ಜೆರಾಕ್ಸ ಆಗಿರುತ್ತವೆ ಎಂದು ಉತ್ತರಿಸಿರುತ್ತಾರೆ. ಆದ್ದರಿಂದ ಸದರಿ ದಾಖಲೆಗಳನ್ನು ಗುರುತಿಸಿರುವುದಿಲ್ಲ.

ಅಕ್ಕಮಹಾದೇವಿ ಇಂಗ್ಲೀಷ ಮಿಡಿಯಮ್ ಹೈಸ್ಕೂಲ್, ಹಿರೇಕಲ್ಮಠ , ಹೊನ್ನಾಳಿ ಇದರ ಶಾಲಾ ಶಿಕ್ಷಕರ ಹಾಜರಾತಿ ಪುಸ್ತಕ ಜೂನ್-2015 ರಿಂದ ಅಕ್ಟೋಬರ್-2022 ರ ವರೆಗೆ ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಒಟ್ಟು 19 ಇದ್ದು, ಎಲ್ಲವನ್ನು ಒಟ್ಟಾಗಿ ನಿಆರ್.4 ಎಂದು ಗುರುತಿಸಲಾಯಿತು.

2021, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹೊನ್ನಾಳಿ ಇವರಿಗೆ ಮಾಹಿತಿ ಕೋರಿ, ಮಾಹಿತಿ ಹಕ್ಕಿನಡಿ ನಾನು ಅರ್ಜಿ ಸಲ್ಲಿಸಿರುತ್ತೇನೆ ಎನ್ನುವುದು ಸುಳ್ಳು. ಸದರಿ ಅರ್ಜಿಯ ಪ್ರಕಾರ ಕ್ಷೇತ್ರ ಶಿಕ್ಷಣಾಧಿಕಾರಿಗಳು ಅಕ್ಕಮಹಾದೇವಿ ಇಂಗ್ಲೀಷ ಮಿಡಿಯಮ್ ಹೈಸ್ಕೂಲ್, ಹಿರೇಕಲ್ಮಠ, ಹೊನ್ನಾಳಿ ಯ ಸ್ಥಳ ಪರಿಶೀಲನೆ ಮಾಡಿ , ಯಾರು ಯಾರು ಸಿಬ್ಬಂದಿಗಳು ಸದರಿ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ವರದಿ ನೀಡಬೇಕೆಂದು ಆದೇಶ ಮಾಡಿರುತ್ತಾರೆ ಎಂದೆರ ನನಗೆ ಗೊತ್ತಿಲ್ಲ. ದೈಹಿಕ ಶಿಕ್ಷಣ ಪರೀವಿಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಹೊನ್ನಾಳಿ, ದಾವಣಗೆರೆ ಇವರು ಸ್ಥಳ ಪರಿಶೀಲನೆ ಮಾಡಿ ವರದಿ ಸಲ್ಲಿಸಿರುತ್ತಾರೆ ಎನ್ನುವುದು ಗೊತ್ತಿಲ್ಲ. ವರದಿ ಪಡೆಯುವ ಸಮಯದಲ್ಲಿ ಸದರಿ ಅಧಿಕಾರಿ ಆ ಶಾಲಾ ಮುಖ್ಯೋಪಾಧ್ಯಯರನ್ನು ವಿಚಾರಣೆ ಮಾಡಿರುತ್ತಾರೆ ಎನ್ನುವುದು ಗೊತ್ತಿಲ್ಲ. ವಿಚಾರಣಾ ನಡುವಳಿಕೆಗಳನ್ನು ಸದರಿ ಅಧಿಕಾರಿ ವರದಿ ಜೊತೆ ಲಗತ್ತಿಸಿರುತ್ತಾರೆ ಎನ್ನುವುದು ಗೊತ್ತಿಲ್ಲ.

ವಿಚಾರಣಾ ನಡುವಳಿಕೆ ಪ್ರಕಾರ ಆ ಶಾಲೆಯಲ್ಲಿ ಎದುರುದಾರರು ಕೆಲಸ ಮಾಡುತ್ತಿರಲಿಲ್ಲ ಎಂದು ವರದಿ ಸಲ್ಲಿಸಿರುತ್ತಾರೆ ಎನ್ನುವುದು ಗೊತ್ತಿಲ್ಲ. ಇದಕ್ಕೆ ಪೂರಕವಾಗಿ ದಿ.16-02-2023 ರಂದು ಎದುರುದಾರರು ಮಾನ್ಯ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಪಡಿಸಿರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ.

ಸುರೇಶ್ ನನ್ನ ಅಣ್ಣ . ಇವರು ಈ ಹಿಂದೆ ಕೆ ಎಸ್ ಆರ್ ಟಿ ಸಿ ಯಲ್ಲಿ ಚಾಲಕನಾಗಿ ನೌಕರಿಯಲ್ಲಿದ್ದರು. ಸದರಿಯವರು ಮರಣ ಹೊಂದಿದ್ದಾರೆ. ಸದರಿಯವರು ಜಾಂಡಿಸ್ ಕಾಯಿಲೆಯಿಂದ ಮರಣ ಹೊಂದಿರುತ್ತಾರೆ. ಅವರು ಮರಣ ಹೊಂದಿದ ನಂತರ ಸದರಿ ಇಲಾಖೆಯಿಂದ ಬರತಕ್ಕ ಪರಿಹಾರದ ಹಣವನ್ನು ಅವರ ಹೆಂಡತಿ ಮಕ್ಕಳು ಪಡೆದಿರುತ್ತಾರೆ ಎನ್ನುವುದು ಗೊತ್ತಿಲ್ಲ.

ಎದುರುದಾರರ ವಕೀಲರ ಕೋರಿಕೆ ಮೇರೆಗೆ ಮುಂದುವರೆದ ಪಾಟೀಸವಾಲಿಗೆ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರು, ದಾವಣಗೆರೆ.